**ಮಾನ್ಯ ಶ್ರೀ ಟಿ.ಎ ಶರವಣ, ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಕ್ರಮ ಸಂಖ್ಯೆ:10 ರ ಕುರಿತು ಉತ್ತರ.**

**::ಪ್ರಶ್ನೆ::**

ಬೆಂಗಳೂರು ನಗರ ಜಿಲ್ಲೆಯ ಕೆ.ಆರ್. ಪುರಂ ತಾಲ್ಲೂಕು, ವರ್ತೂರು ಹೋಬಳಿಯ ಕಾಡುಬೀಸನಹಳ್ಳಿ ಗ್ರಾಮದಲ್ಲಿ ವಿವಾದಿತ ಜಾಗದಲ್ಲಿ ನೋಟೀಸ್ ನೀಡದೇ ಕಾರ್ಯಾಚರಣೆ ನಡೆಸಿ 100 ಕ್ಕೂ ಹೆಚ್ಚು ಮನೆಗಳನ್ನು KIADB ಅಧಿಕಾರಿಗಳು ತೆರವುಗೊಳಿಸಿದರು. ಐಟಿ ಕಂಪನಿಯೊಂದಕ್ಕೆ ಮಂಜೂರಾಗಿದ್ದ ಭೂಮಿಯ ಪೈಕಿ ಒಂದು ಎಕರೆ ಜಾಗದಲ್ಲಿ ಮೊದಲೇ ಮನೆಗಳು ನಿರ್ಮಾಣವಾಗಿದ್ದು, ಬಿಬಿಎಂಪಿಯಿಂದ ಖಾತೆಯಾಗಿರುವ ಹಿನ್ನಲೆಯಲ್ಲಿ 2017 ರಲ್ಲಿಯೇ ಭೂಸ್ವಾಧೀನದಿಂದ ಈ ಜಾಗವನ್ನು ಕೈಬಿಡಲಾಗಿತ್ತು. ಬಳಿಕ ಈ ವಿಚಾರ ಹೈ ಕೋರ್ಟ ಹಾಗೂ ಸುಪ್ರಿಂ ಕೋರ್ಟ ಮೆಟ್ಟಿಲೇರಿತ್ತು. ಪರಿಹಾರ ಕೊಟ್ಟು ಭೂಮಿ ಪಡೆಯಬಹುದು ಎಂದು ಹೈಕೋರ್ಟನ ವಿಭಾಗೀಯ ಪೀಠ ಆದೇಶ ನೀಡಿತ್ತಾದರೂ ನಿವಾಸಿಗಳು ಒಪ್ಪದ ಹಿನ್ನಲೆಯಲ್ಲಿ ವಿವಾದ ಮುಂದುವರೆದಿತ್ತು. ಈ ಮಧ್ಯೆ KIADB ಅಧಿಕಾರಿಗಳು ದಿಡೀರ್ ಜೆಸಿಬಿಗಳ ನೆರವಿನಿಂದ ತೆರವು ಕಾರ್ಯಾಚರಣೆ ಮಾಡಿದರು. ಈ ಸಂದರ್ಭದಲ್ಲಿ ಹಲವು ಮನೆಗಳ ಸಾಮಾಗ್ರಿಗಳು ಮಣ್ಣುಪಾಲಾದವು. ಕೆಲವರು ಮನೆ ತೊರೆಯಲು ನಿರಾಕರಿಸಿದ್ದರಿಂದ ಪೊಲೀಸರು ವಶಕ್ಕೆ ಪಡೆದರು. ಅಲ್ಲಿನ ನಿವಾಸಿಗಳು ಮನೆ ಸಾಮಾಗ್ರಿಗಳನ್ನು ಬೀದಿಯಲ್ಲಿ ಇಟ್ಟುಕೊಂಡು ಕುಳಿತಿರುವ ದೃಶ್ಯ ಕರಳು ಹಿಂಡುವಂತಿತ್ತು. ಭೂ ಸ್ವಾಧೀನದಿಂದ ಬಿಟ್ಟು ಈ ರೀತಿ ಕೋರ್ಟನಲ್ಲಿ ವಿವಾದದಲ್ಲಿರು ಜಮೀನನ್ನು ನೋಟೀಸ್ ನೀಡದೆ ಏಕಾಏಕಿ ನಾಗರಿಕರನ್ನು ಬೀದಿಪಾಲು ಮಾಡಿರುವ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು ಹಾಗೂ ಅಲ್ಲಿನ ನಿವಾಸಿಗಳಿಗೆ ನ್ಯಾಯ ಒದಗಿಸಕೊಡಬೇಕೆಂದು ನಾನು ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**:: ಉತ್ತರ ::**

1. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕಾಡುಬೀಸನಹಳ್ಳಿ ಮತ್ತು ಇತರೆ ಗ್ರಾಮಗಳಲ್ಲಿ ಸರ್ಕಾರದ ಅಂತಿಮ ಅಧಿಸೂಚನೆ ಸಂಖ್ಯೆ. ಸಿಐ:126:ಎಸ್ಪಿಕ್ಯೂ:2005, ಬೆಂಗಳೂರು, ದಿನಾಂಕ:19.12.2005 ರಂದು ಹೊರಡಿಸಿ ಒಟ್ಟು 97-00 ಎಕರೆ ಭೂಮಿಯನ್ನು ಕೈಗಾರಿಕೆ ಅಭಿವೃದ್ಧಿಪಡಿಸಲು ಭೂಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ.

2. ಆ ಪೈಕಿ ಕಾಡುಬೀಸನಹಳ್ಳಿ ಗ್ರಾಮದ ಸರ್ವೆ ನಂ.23/4 ರಲ್ಲಿ 4 ಎಕರೆ 24 ಗುಂಟೆ ಹಾಗೂ ಸರ್ವೆ ನಂ.24 ರಲ್ಲಿ 4 ಎಕರೆ 25 ಗುಂಟೆ ಒಟ್ಟು 9 ಎಕರೆ 09 ಗುಂಟೆ ಜಮೀನನ್ನು ಏಕ ಘಟಕ ಸಂಕೀರ್ಣದಡಿಯಲ್ಲಿ (SUC) M/s. Mysore IT Solutions Pvt Ltd ರವರಿಗೆ ದಿನಾಂಕ:18.01.2007 ರಲ್ಲಿ 3 ಎಕರೆ 05 ಗುಂಟೆ ಹಾಗೂ ದಿನಾಂಕ:25-06-2014 ರಲ್ಲಿ 6 ಎಕರೆ 04 ಗುಂಟೆ ಒಟ್ಟು 9 ಎಕರೆ 09 ಗುಂಟೆ ಜಮೀನನ್ನು ಹಂಚಿಕೆ ಮಾಡಲಾಗಿರುತ್ತದೆ.

3. ದಿನಾಂಕ:29-05-2007 ರಂದು 3 ಎಕರೆ 05 ಗುಂಟೆ ಹಾಗೂ ದಿನಾಂಕ:19-10-2016 ರಂದು 6 ಎಕರೆ 04 ಗುಂಟೆ ಜಮೀನು ಮತ್ತು ಕಟ್ಟಡಗಳನ್ನು ಈ ಕೆಳಗಿನಂತೆ ಹಸ್ತಾಂತರ / ಸ್ವಾಧೀನ ಪತ್ರ ನೀಡಲಾಗಿರುತ್ತದೆ.

| |
|---|
| As per records, dated:19-10-2016 the Possession of the land and building in Sy No.23/4 & 24 of Kadubeesanahalli Village, Varthur Hobli, Bangalore East Taluk handed over "As and where basis" subject to outcome of court cases and same as accepted by the allottee with following Building structures, Malkies and Trees in the land. |

| Sy. No.23/4 | No | Sy.No.24 | No. |
|---|---|---|---|
| Three floors RCC building with habitants | 3 | Three floors RCC building with habitants | 3 |
| Two floors RCC building with habitants | 1 | Two floors RCC building with habitants | 3 |
| Two floors RCC building with habitants | 1 | RCC building with habitants | 1 |
| ACC roof buildings habitants | | ACC sheet shops | 3 |
| Moulded sheet car garage | 1 | Various types of trees | |
| Moulded sheet hotel | 1 | | |
| Moulded sheet Vehicle Parking | 1 | | |
| Various types of Trees | | | |

4. ಮುಂದುವರೆದು, ಭೂಮಾಲೀಕರು ಸರ್ವೆ ನಂ.23/4 & 24 ರ ಭೂಸ್ವಾಧೀನವನ್ನು ಪ್ರಶ್ನಿಸಿ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಹೂಡಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಆರ್.ಪಿ 295/2013, ಆರ್.ಪಿ 296/2013 ಮತ್ತು ಆರ್.ಪಿ 330/2013 ರಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಭೂಸ್ವಾಧೀನ ಪ್ರಕ್ರಿಯೆಯನ್ನು ಎತ್ತಿಹಿಡಿದು ದಿನಾಂಕ:10.11.2016 ರಂದು ಆದೇಶ ಹೊರಡಿಸಿರುತ್ತದೆ. ಸದರಿ ಆದೇಶದ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು SLP(A) 21836-24837/2016 ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಎತ್ತಿಹಿಡಿದು ದಿನಾಂಕ:27.01.2017 ರಂದು ತೀರ್ಪು ಹೊರಡಿಸಿರುತ್ತದೆ.

5. ಕಾಡುಬೀಸನಹಳ್ಳಿ ಗ್ರಾಮದ ಸ.ನಂ.23/4 ರಲ್ಲಿ 4-17 ಎ/ಗು ವಿಸ್ತೀರ್ಣದ ಜಮೀನಿಗೆ ದಿನಾಂಕ: 15.09.2018 ರಂದು ಸಾಮಾನ್ಯ ಐತೀರ್ಪು ರಚಿಸಿ. ದಿ: 23.04.2018 ರಂದು ಅವಾರ್ಡ ನೋಟೀಸ್ ಜಾರಿಗೊಳಿಸಲಾಗಿದ್ದು, ಕಲಂ 30 ಮತ್ತು 31ರಡಿ ಎಲ್.ಎ.ಸಿ ನಂ.69/2018ರಂತೆ ಪ್ರಕರಣ ದಾಖಲಿಸಿ ರೂ.82,69,000/-ಗಳನ್ನು ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಿಟಿ ಸಿವಿಲ್ ಕೋರ್ಟ್ ಬೆಂಗಳೂರು ರವರಲ್ಲಿ ದಿನಾಂಕ: 10.09.2018 ರಂದು ಠೇವಣಿಸಲಾಗಿರುತ್ತದೆ. ಸದರಿ ಪ್ರಕರಣವು ಇತ್ಯಾರ್ಥಕ್ಕಾಗಿ ಬಾಕಿ ಇರುತ್ತದೆ.

6. ಕಾಡುಬೀಸನಹಳ್ಳಿ ಗ್ರಾಮದ ಸ.ನಂ.24 ರಲ್ಲಿ 4-21 ಎ/ಗು ವಿಸ್ತೀರ್ಣದ ಜಮೀನಿಗೆ ದಿನಾಂಕ: 15.02.2018 ರಂದು ಸಾಮಾನ್ಯ ಐತೀರ್ಪು ರಚಿಸಿ, ದಿ: 23.04.2018 ರಂದು ಅವಾರ್ಡ ನೋಟೀಸ್ ಜಾರಿಗೊಳಿಸಲಾಗಿದ್ದು, ಕಲಂ 30 ಮತ್ತು 31ರಡಿ ಎಲ್.ಎ.ಸಿ ನಂ.62/2018ರಂತೆ ಪ್ರಕರಣ ದಾಖಲಿಸಿ ರೂ.2,22,30,829/-ಗಳನ್ನು ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಿಟಿ ಸಿವಿಲ್ ಕೋರ್ಟ್ ಬೆಂಗಳೂರು ರವರಲ್ಲಿ ದಿನಾಂಕ: 10.09.2018 ರಂದು ಠೇವಣಿಸಲಾಗಿರುತ್ತದೆ. ಸದರಿ ಪ್ರಕರಣವು ಇತ್ಯಾರ್ಥಕ್ಕಾಗಿ ಬಾಕಿ ಇರುತ್ತದೆ.

7. ಭೂ-ಸಂತ್ರಸ್ಥರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪುನಃ WP ಸಂಖ್ಯೆ 5916/2017, C/w_WP ಸಂಖ್ಯೆ.7980/2017 C/w WP ಸಂಖ್ಯೆ 8214/2017 (LA-KIADB) ರಲ್ಲಿ ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣಗಳಲ್ಲಿ ಪ್ರತ್ಯೇಕವಾಗಿ ಭಾಗಶಃ ಪುರಸ್ಕರಿಸಿ ಉಳಿದಂತೆ ವಜಾಗೊಳಿಸಿ ದಿನಾಂಕ:01-08-2022 ರಂದು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿರುತ್ತದೆ.

> "The respondents are directed to pass fresh awards in favour of the petitioners and pay them compensation together with all benefits interest etc., in respect of the petition schedule property as per the provisions of the Right to Fair Compensation and Transparency in Land Acquisition, Rehabilitation and Resettlement, Act 2013, as expeditiously as possible and within a period of three months from the date of receipt of a copy of this order"

8. ವಾಸ್ತವವಾಗಿ ನ್ಯಾಯಾಲಯದಲ್ಲಿ ಪ್ರಕರಣಗಳು ಸತತವಾಗಿ ಬಾಕಿ ಇದುದ್ದರಿಂದ ಭೂಸಂತ್ರಸ್ಥರು M/s. Mysore IT Solutions Pvt Ltd ರವರಿಗೆ ಹಸ್ತಾಂತರಿಸಿರುವ ಜಮೀನಿನಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಲು ಆಸ್ಪದ ನೀಡದಿರುವುದು ಕಂಡು ಬಂದಿದೆ.

9. ಆದ್ದರಿಂದ ಕೈಗಾರಿಕಾ ಅಭಿವೃದ್ಧಿ ಚಟುವಟಿಕೆಗಳಿಗೆ ಮತ್ತಷ್ಟು ವಿಳಂಭವಾಗುತ್ತಿದ್ದು, ದಿನಾಂಕ:25.01.2024 ರಂದು ಬೆಂಗಳೂರು ಪೂರ್ವ ಜಿಲ್ಲೆ, ವರ್ತೂರು ಹೋಬಳಿ, ಕಾಡುಬೀಸನಹಳ್ಳಿಯ ಸರ್ವೆ ನಂ.23/4 ಮತ್ತು 24 ಅನ್ನು ಸೂಕ್ತ ಪೋಲಿಸ್ ಬಂದೋಬಸ್ತ್ ನೊಂದಿಗೆ ಮಂಡಳಿಯ ವಶಕ್ಕೆ ಪಡೆಯಲು ನಿರ್ಣಯಿಸಿ ಸಂಬಂಧಿಸಿದ ಉಪ-ಪೋಲಿಸ್, ಆಯುಕ್ತರಿಗೆ ಪ್ರಸ್ತಾವಿತ ಜಾಗದಲ್ಲಿ ಸೂಕ್ತ ಪೋಲಿಸ್ ಬಂದೋಬಸ್ತ್ ಒದಗಿಸುವಂತೆ ಕೋರಲಾಗಿರುತ್ತದೆ.

10. ದಿನಾಂಕ:25.01.2024 ರಂದು ಸೂಕ್ತ ಪೋಲಿಸ್ ಬಂದೋಬಸ್‌ನೊಂದಿಗೆ ಅನಧಿಕೃತ ಕಟ್ಟಡಗಳ ತೆರವು ಕಾರ್ಯಾಚರಣೆಯನ್ನು ಕೈಗೊಳ್ಳಲಾಗಿರುತ್ತದೆ. ಈ ಸಂದರ್ಭದಲ್ಲಿ ರಿಟ್ ಅಪೀಲ್ ಸಂಖ್ಯೆ:1105/2022, 1146/2022 & 1198/2022 ಪ್ರಕರಣವನ್ನು ದಾಖಲಿಸಿರುವ ಭೂ ಸಂತ್ರಸ್ತರು ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ತೆರವು ಕಾರ್ಯಾಚರಣೆ ಸ್ಥಗಿತಗೊಳಿಸುವಂತೆ, ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ್ದನ್ನು ಪರಿಗಣಿಸಿದ ಮಾನ್ಯ ಉಚ್ಚ ನ್ಯಾಯಾಲಯವು ಸರ್ಕಾರಿ ವಕೀಲರಿಗೆ ನಿರ್ದೇಶನ ನೀಡಿ, ತೆರವು ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸುವಂತೆ ನಿರ್ದೇಶನ ನೀಡಿದ ಹಿನ್ನೆಲೆಯಲ್ಲಿ ಸದರಿ ಅನಧಿಕೃತ ಕಟ್ಟಡಗಳ ತೆರವು ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ.

11. ಮಾನ್ಯ ಉಚ್ಚ ನ್ಯಾಯಾಲಯವು ಮಂಡಳಿ ಹಾಗೂ ಭೂ ಸಂತ್ರಸ್ತರು ದಾಖಲಿಸಿರುವ ರಿಟ್ ಅಪೀಲ್ ಸಂಖ್ಯೆ: 1071/2022, 1064/2022, 1072/2022, 1105/2022, 1146/2022 & 1198/2022 ಹಾಗೂ ಇತರೆ ಪ್ರಕರಣಗಳನ್ನು ಒಟ್ಟುಗೂಡಿಸಿ, **ದಿನಾಂಕ:21.02.2025** ರಂದು ಪ್ರಕರಣ ಇತ್ಯರ್ಥ ಪಡಿಸಿ, ಭೂ ಮಾಲೀಕರ ರಿಟ್ ಮೇಲ್ಮನವಿ ವಜಾಗೊಳಿಸಿದ್ದು, ಸದರಿ ಭೂ ಸ್ವಾಧೀನ ಪ್ರಕ್ರಿಯೆಗೆ ಹೊಸ ಭೂ ಸ್ವಾಧೀನ ಕಾಯ್ದೆ 2013 ಅನ್ವಯಿಸುವುದಿಲ್ಲವೆಂದು ಭೂ ಸ್ವಾಧೀನವನ್ನು ಎತ್ತಿಹಿಡಿದಿದ್ದು, ಕೆ.ಐ.ಎ.ಡಿ ಕಾಯ್ದೆ 1966 ರನ್ವಯ ಪರಿಹಾರ ಪಾವತಿಸಲು ಕ್ರಮ ವಹಿಸುವಂತೆ ಮಂಡಳಿಗೆ ನಿರ್ದೇಶನ ನೀಡಿರುತ್ತದೆ. ಮಾನ್ಯ ನ್ಯಾಯಾಲಯದ ಆದೇಶದನ್ವಯ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ.

**ಸಂಖ್ಯೆ: ಸಿಐ 202 ಐಎಪಿ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು